ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 1/3/21

# ಜಾರಕಿಹೊಳಿ ಬಳಿಯಿರುವ ದಾಖಲೆ ಬಿಡುಗಡೆ ಮಾಡಲಿ

## ಬೆಚ್ಚಿಬೀಳಿಸುವ ಸಾಕ್ಷ್ಯವೇನು ಎನ್ನುವುದನ್ನು ನೋಡೋಣ। ಸತ್ಯ ಹೇಳಿದರೆ ನನ್ನ ಮೇಲಿನ ಗೌರವ ಕಡಿಮೆಯಾದರೆ ನಾನೇನು ಮಾಡಲಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

27/3/21

ನನ್ನ ಕಿಸೆಯಲ್ಲಿ ಬೆಚ್ಚಿಬೀಳಿಸುವ ದಾಖಲೆಗಳಿವೆ ಎಂದು ಹೇಳಿದ್ದ ರಮೇಶ್ ಜಾರಕಿಹೊಳಿ ಅವರಿಗೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಟಾಂಗ್ ಕೊಟ್ಟಿದ್ದು, 'ದಾಖಲೆಗಳನ್ನು ಮುಚ್ಚಿಡುವುದು ಅಪರಾಧ. ಆದ್ದರಿಂದ ಜಾರಕಿಹೊಳಿ ಅವರು ಅದನ್ನು ಬಹಿರಂಗಪಡಿಸಬೇಕು' ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾರಕಿಹೊಳಿ ಪ್ರಸ್ತಾಪಿಸಿರುವ ಮಹಾನಾಯಕರು ಯಾರು ಎಂದು ಗೊತ್ತಿಲ್ಲ. ಕಾಂಗ್ರೆಸ್‌ನಲ್ಲಿ ತುಂಬಾ ಜನ ನಾಯಕರಿದ್ದಾರೆ. ಬಿಜೆಪಿಯಲ್ಲೂ ಮಹಾನಾಯಕರಿದ್ದಾರೆ. ಸುಮ್ಮನೆ ಗುಮ್ಮ ಬಿಡಬಾರದು. ಸತ್ಯವನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.



ಇನ್ನು ಜಾರಕಿಹೊಳಿ ಅವರ ಪ್ರಕರಣದಲ್ಲಿರುವ ಯುವತಿ ನೇರವಾಗಿ ಪೊಲೀಸ್ ಠಾಣೆಯ ಮುಂದೆ ಹಾಜರಾಗದೆ, ಎಲ್ಲಿಯೋ ಮರೆಯಲ್ಲಿ ನಿಂತು ಹೇಳಿಕೆ ನೀಡುತ್ತಿದ್ದಾರೆ. ಈ ರೀತಿ ಮಾಡುವುದು ಸರಿಯಲ್ಲ. ಯುವತಿ ವಿಡಿಯೊ ಮೂಲಕ ಹೇಳಿಕೆ ನೀಡುವ ಬದಲು, ನೇರವಾಗಿ ಪೊಲೀಸರ ಮುಂದೆ ಹಾಜರಾಗಿ ಸತ್ಯ ಹೇಳಿದರೆ ಅದರ ಗೌರವ ಹೆಚ್ಚುತ್ತದೆ ಎಂದು ನಾನು ಸಲಹೆ ನೀಡುತ್ತೇನೆ ಎಂದು ಹೇಳಿದರು.

**ಸತ್ಯ ಹೇಳಿದರೆ ಬೇಸರ:** ಗುರುವಾರದ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ, 'ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲಿಸಬೇಕೆಂದು ಹೇಳಿದ ಬಳಿಕ ಸಿದ್ದರಾಮಯ್ಯ ಅವರ ಮೇಲಿದ್ದ ಗೌರವ ಕಡಿಮೆಯಾಗಿದೆ' ಎಂದು ಹೇಳಿದ್ದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ಸತ್ಯ ಹೇಳುವುದರಿಂದ ಗೌರವ ಕಡಿಮೆಯಾಗುವುದಾದರೆ ನಾನೇನು ಮಾಡಲು ಸಾಧ್ಯವಿಲ್ಲ. ಪ್ರತಿಪಕ್ಷದ ನಾಯಕನಾಗಿ, ವಕೀಲನಾಗಿ ಸತ್ಯ ಹೇಳುವುದು ನನ್ನ ಕರ್ತವ್ಯ ಎಂದು ಹೇಳಿದರು.

### ಎಸ್‌ಐಟಿ ಮುಂದೆ ಯುವತಿ ಹೇಳಿಕೆ ದಾಖಲಿಸಲಿ

**ರಾಜ್ಯದ ಪ್ರತಿಯೊಬ್ಬರಿಗೂ ರಕ್ಷಣೆ ನೀಡುವುದು ರಾಜ್ಯ ಸರಕಾರದ ಜವಾಬ್ದಾರಿಯಾಗಿದ್ದು, ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರಿಂದ ದೌರ್ಜನ್ಯಕ್ಕೆ ಒಳಗಾಗಿರುವ ಯುವತಿ ಮೊದಲು ಎಸ್‌ಐಟಿ ಮುಂದೆ ಹಾಜರಾಗಿ ಹೇಳಿಕೆ ನೀಡಬೇಕು. ಸಂತ್ರಸ್ತ ಯುವತಿಗೆ ರಕ್ಷಣೆ ನೀಡುವಂತೆ ಗೃಹ ಸಚಿವರಿಗೆ ಹೇಳಿದ್ದೇನೆ. ಈ ಕುರಿತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಜತೆಗೂ ಮಾತನಾಡುತ್ತೇನೆ. ಯುವತಿ ಸೇರಿ ಎಲ್ಲ ಕನ್ನಡಿಗರಿಗೂ ರಕ್ಷಣೆ ನೀಡುವುದು ರಾಜ್ಯ ಸರಕಾರದ ಜವಾಬ್ದಾರಿ. ಆದರೂ ಯುವತಿಗೆ ರಕ್ಷಣೆ ನೀಡಿಲ್ಲ. ಇದು ಸರಕಾರದ ವೈಫಲ್ಯ ಎಂದರು.**

# ಯಾವ ಕೇಸ್ ಆದರೂ ಹಾಕಲಿ, ಎದುರಿಸಲು ಸಿದ್ಧ

ಬೆಂಗಳೂರು: ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಯುವತಿ ಪರ ವಕೀಲರು ಅತ್ಯಾಚಾರದ ಪ್ರಕರಣದ ದಾಖಲಿಸುತ್ತಿದ್ದಂತೆ, ಈ ವಿಷಯವಾಗಿ ಪ್ರತಿಕ್ರಿಯಿಸಿರುವ ಜಾರಕಿಹೊಳಿ ಅವರು, 'ಯಾವ ಕೇಸಾದರೂ ಹಾಕಿಕೊಳ್ಳಲಿ. ಎಲ್ಲವನ್ನು ಎದುರಿಸಲು ಸಿದ್ಧ' ಎಂದು ತಿರುಗೇಟು ನೀಡಿದ್ದಾರೆ.

- **ನಿಜವಾದ ಸಂತ್ರಸ್ತೆಯಾಗಿದ್ದರೇ ಮೊದಲೇ ದೂರು ನೀಡಬೇಕಿತ್ತು**
- **ಯಾವುದೇ ಕಾರಣಕ್ಕೂ ನಾನು ನಿರೀಕ್ಷಣಾ ಜಾಮೀನು ಪಡೆಯುವುದಿಲ್ಲ**
- **ಯುವತಿ ಸೂಕ್ತ ರೀತಿಯಲ್ಲಿ ದೂರು ನೀಡಿದಲ್ಲಿ ತನಿಖೆ: ಬೊಮ್ಮಾಯಿ**

ದೂರು ದಾಖಲಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಕೆ ನಿಜವಾದ ಸಂತ್ರಸ್ತೆಯಾಗಿದ್ದರೆ ಮೊದಲೇ ದೂರು ಕೊಡಬೇಕಿತ್ತು. ಈಗ ಎಲ್ಲೋ ಕುಳಿತು ದೂರು ಕೊಡುತ್ತಿದ್ದಾಳೆ. ಇದೊಂದು ಮಹಾ ಷಡ್ಯಂತ್ರ ಎಂದು ಮೊದಲಿಂದಲೂ ಹೇಳುತ್ತಿದ್ದೇನೆ. ಇಂತಹ 10 ಸಿಡಿ ಬಿಡಲಿ. ಯಾವ ಕೇಸ್ ಬೇಕಾದರೂ ಹಾಕಲಿ. ಎಲ್ಲದಕ್ಕೂ ನಾನು ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ಯಾವುದೇ ಕಾರಣಕ್ಕೂ ನಾನು ನಿರೀಕ್ಷಣಾ ಜಾಮೀನು ತೆಗೆದುಕೊಳ್ಳುವುದಿಲ್ಲ. ನಾನೇನು ತಪ್ಪು ಮಾಡಿಲ್ಲ. ಹಾಗಿದ್ದ ಮೇಲೆ ನಾನೇಕೆ ಜಾಮೀನು ತೆಗೆದುಕೊಳ್ಳಬೇಕೆಂದು ಮರುಪ್ರಶ್ನಿಸಿದ್ದಾರೆ.

### ಕಾನೂನು ರೀತಿಯಲ್ಲಿ ದೂರು ನೀಡಲಿ: ಬೊಮ್ಮಾಯಿ

**ಸಿಡಿ ಸಂತ್ರಸ್ತೆ ಹಾಗೂ ಅವರ ಕುಟುಂಬದವರಿಗೆ ಸೂಕ್ತ ಭದ್ರತೆ ಕೊಡಲು ಸೂಚನೆ ನೀಡುವುದಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲು ಮುಂದೆ ಬಂದು ಕಾನೂನು ರೀತಿಯಲ್ಲಿ ದೂರು ನೀಡಲಿ. ಅವರ ಕುಟುಂಬಕ್ಕೆ ಭದ್ರತೆ ನೀಡಲು ಸೂಚಿಸಿದ್ದೇವೆ. ಸಿಡಿ ಸಂತ್ರಸ್ತೆಗೂ ಭದ್ರತೆ ನೀಡಬೇಕೆಂದು ಕೇಳಿದರೆ ಅದನ್ನೂ ಕೊಡಲು ಸಿದ್ಧ ಎಂದರು. ಈಗಾಗಲೇ ಯುವತಿಗೆ 5 ನೋಟಿಸ್ ನೀಡಲಾಗಿದೆ. ಹಾಗಾಗಿ ಅವರಿಗೆ ಕಾನೂನು ರೀತಿಯಲ್ಲಿ ಏನು ಕ್ರಮವಿದೆಯೋ ಅದನ್ನು ಪಾಲಿಸಲಾಗುತ್ತದೆ. ಯುವತಿ ಎಲ್ಲಿ ಇದ್ದಾರೋ ಅಲ್ಲಿಗೆ ಹೋಗಿ ಹೇಳಿಕೆ ಪಡೆಯಲು ಹೇಳಿದರೆ ಅದಕ್ಕೂ ಅವಕಾಶ ಮಾಡಿ ಕೊಡುತ್ತೇನೆ. ಈ ಹಿಂದೆಯೂ ಹೇಳಿದ್ದ ಈಗಲೂ ಹೇಳುತ್ತಿದ್ದೇನೆ. ಮೊದಲು ದೂರು ಕೊಡಬೇಕು ಎಂದು ಹೇಳಿದರು.**

ನಾನು ವಕೀಲರ ಜತೆ ಮಾತನಾಡುತ್ತೇನೆ. ಆ ಬಳಿಕ ಹೆಚ್ಚಿನ ವಿವರ ನೀಡುತ್ತೇನೆ. ಸಿಡಿ ಸೇರಿದಂತೆ ಇನ್ನೂ ಏನೇನು ಬಿಡುತ್ತಾರೋ ಬಿಡಲಿ. ನಾನು ರೆಡಿ ಇದ್ದೇನೆ ಎಂದರು.